ಆದರೆ ಮುಂಬಯಿ ಮಹಾನಗರದಲ್ಲಿ ವರ್ಷವಿಡೀ ಜನರ ನಡುವೆ ಓಡಾಡುವ ಪಕ್ಷಿಗಳೆಂದರೆ ಪಾರಿವಾಳಗಳು. ಸ್ಥಳೀಯ ಭಾಷೆಯಲ್ಲಿ ಕಬೂತರ್. ಈ ಪಾರಿವಾಳಗಳಿಗೆ ಆಹಾರ ನೀಡಲೆಂದೇ ಮುಂಬಯಿಯ ವಿವಿಧೆಡೆ 'ಕಬೂತರ್ ಖಾನಾ'ಗಳಿವೆ. ಮುಂಬಯಿಯ ಕಬೂತರ್ ಖಾನಾಗಳ ಗ್ಲಾಮರ್ ಇಲ್ಲಿಗೆ ಬಂದೇ ವೀಕ್ಷಿಸಬೇಕು. ಆದರೆ ಈ ಪಾರಿವಾಳಗಳು ಮಹಾ ಸೋಮಾರಿ. ದೂರ ದೂರ ಹಾರುವುದೆಂದರೆ ಸುತಾರಾಂ ಒಪ್ಪುವುದಿಲ್ಲ!

ಮುಂಬಯಿಯಲ್ಲಿ ಪಕ್ಷಿಪ್ರೇಮಿಗಳ ಸಂಖ್ಯೆ ಬಹಳವಿದೆ. ಅದರಲ್ಲೂ ಪಾರಿವಾಳಗಳಂತೂ ಯಾರ ಭಯವೂ ಇಲ್ಲದೆ ಇಲ್ಲಿ ಜನರ ನಡುವೆಯೇ ಇರಬಲ್ಲದು. ಮುಂಬಯಿಯಲ್ಲಿರುವ ಕಬೂತರ್ ಖಾನಾಗಳಲ್ಲಿ ದಾದರ್‌ನ 'ಕಬೂತರ್ ಖಾನಾ'ಗೆ ಹೆಚ್ಚು ಪ್ರಸಿದ್ಧಿ.

ರಸ್ತೆ ಬದಿಯಲ್ಲೋ ಪ್ರಮುಖ ಚೌಕ್‌ಗಳಲ್ಲೋ ಇರುವ ಕಬೂತರ್ ಖಾನಾಗಳಲ್ಲಿ ಗೋಧಿ, ಜೋಳ, ಕಡಲೆ... ಮುಂತಾದ ಧಾನ್ಯಗಳನ್ನು ಜಮೀನಿನಲ್ಲಿ ಹಾಕಿ ಪಾರಿವಾಳಗಳಿಗೆ ತಿನ್ನಿಸಿ 'ಪುಣ್ಯ' ಕಟ್ಟಿಕೊಳ್ಳುವವರು ಮುಂಬಯಿಯಲ್ಲಿ ಸಾಕಷ್ಟಿದ್ದಾರೆ. ಈ ಧಾನ್ಯಗಳನ್ನು ತಿನ್ನಲು ನೂರಾರು ಸಂಖ್ಯೆಯಲ್ಲಿ ಹಿಂಡು ಹಿಂಡು ಪಾರಿವಾಳಗಳು ಬರುತ್ತವೆ. ಯಾವ ಭಯವೂ ಇಲ್ಲದೆ –ಜನರು ಹಾಕಿದ ಧಾನ್ಯಗಳನ್ನು ತಿನ್ನುತ್ತವೆ. ಬೆಳಗ್ಗಿನಿಂದ ಸಂಜೆ ತನಕವೂ ಈ ಪಾರಿವಾಳಗಳು ಇಂತಹ ಕಬೂತರ್ ಖಾನಾಗಳಲ್ಲಿ ಧಾನ್ಯ ತಿನ್ನುತ್ತಿರುತ್ತವೆ. ದಾದರ್ ಕಬೂತರ್ ಖಾನಾದಲ್ಲೇ ದಿನಕ್ಕೆ ಕೆಲವು ಕ್ವಿಂಟಲ್ ಧಾನ್ಯ ಎಸೆಯಲಾಗುತ್ತದೆ ಎಂದರೆ ನಂಬಲೇ ಬೇಕು. ಇಂತಹ ಕಬೂತರ್ ಖಾನಾಗಳ ಪಕ್ಕದಲ್ಲೆ ಕಡಲೆ, ಜೋಳ... ಇತ್ಯಾದಿ ಮಾರುವ ಅಂಗಡಿಗಳೂ ಇರುತ್ತವೆ. ಹೀಗಾಗಿ ದಿನವಿಡೀ ಪಾರಿವಾಳಗಳು ಇಲ್ಲೇ ಬಿದ್ದಿರುತ್ತವೆ ಹೊರತು ಹಾರುವುದೆಂದರೆ ಉದಾಸೀನ.

ಮುಂಬಯಿ ಮಹಾನಗರದಲ್ಲಿ ದಾದರ್‌ನಂತೆಯೇ ಸಿ.ಎಸ್.ಟಿ.ಯಲ್ಲಿರುವ ಜಿ.ಪಿ.ಓ, ಮರೀನ್ ಲೈನ್ಸ್, ಭೂಲೇಶ್ವರ, ಪಾಂಜ್ರಾಪೋಲ್, ಗ್ರಾಂಟ್‌ರೋಡ್, ತಾರ್ದೇವ್, ಹಾಜಿ ಅಲೀ, ಲ್ಯಾಮಿಂಗ್ಟನ್ ರೋಡ್, ಬ್ರೀಚ್‌ಕ್ಯಾಂಡಿ, ಪೆಡ್ಡರ್ ರೋಡ್, ಖಾರ್, ಲೋಖಂಡ್‌ವಾಲಾ, ಬೋರಿವಲಿ, ಗೇಟ್‌ವೇ ಆಫ್ ಇಂಡಿಯಾ... ಹೀಗೆ ವಿವಿಧೆಡೆ ಕಬೂತರ್ ಖಾನಾಗಳಿವೆ. ಇವುಗಳಲ್ಲಿ ಅನೇಕ ಕಬೂತರ್ ಖಾನಾಗಳು ಅಕ್ಬರ್‌ನ ಕಾಲದಿಂದಲೂ ಚಾಲ್ತಿಯಲ್ಲಿವೆ ಎನ್ನುವ ನಂಬಿಕೆ ಇದೆ. ಮುಂಬಯಿ ಶಹರ ಮತ್ತು ಉಪನಗರಗಳಲ್ಲಿ ಇನ್ನೂರರಷ್ಟು

ಕಬೂತರ್ ಖಾನಾಗಳಿದ್ದುವು. ಆದರೆ ಇಂದು ಕೆಲವಷ್ಟೇ ಉಳಿದುಕೊಂಡಿವೆ. ಆದರೆ ಗ್ರೇಡ್–2

**ಪುಟ** 43 **ನೋಡಿ**



# ಪಾರಿವಾಳಗಳಿಗೆ ಭಯವಿಲ್ಲ!

ಮುಂಬಯಿಯ ಪಾರಿವಾಳಗಳಿಗೆ ಭಯವೆಂಬುದಿಲ್ಲ. ನಿಜವಾಗಿ ಪಾರಿವಾಳಗಳು ಎಷ್ಟು ದೂರಕ್ಕೂ ಹಾರಲು ಸಾಮರ್ಥ್ಯ ಇರುವಂಥದ್ದು. ಆದರೆ ಮುಂಬಯಿಯಲ್ಲಿ ಈ ಪಾರಿವಾಳಗಳು ದೂರಕ್ಕೆ ಬಿಡಿ, ಬಿಲ್ಡಿಂಗ್‌ಗಳ ಟೆರೇಸ್‌ಗಿಂತ ಮೇಲಕ್ಕೆ ಹಾರಲೂ ಇಷ್ಟ ಪಡುವುದಿಲ್ಲ. ಕಬೂತರ್ ಖಾನಾಗಳಲ್ಲಿ ಮನುಷ್ಯರು ನೀಡುವ ಧಾನ್ಯಗಳನ್ನು ತಿನ್ನುತ್ತಾ ಅವು ದಿನವಿಡೀ ಹಾಯಾಗಿ ಇರುತ್ತವೆ. ಮನುಷ್ಯರ ಭಯವೇ ಇವುಗಳಿಗೆ ಇರುವುದಿಲ್ಲ. ಮುಂಬಯಿಯ ಪಾರಿವಾಳಗಳು ಹೆಚ್ಚಾಗಿ ಆರೋಗ್ಯದಿಂದಲೂ ಇರುವುದಿಲ್ಲ. ಒಂದಿಲ್ಲೊಂದು ರೋಗದಿಂದ ನರಳುತ್ತಿವೆ. ಪಾರಿವಾಳಗಳಿಗೆ ಪ್ರಕೃತಿಯೆ ದೂರದೂರಕ್ಕೆ ಆಕಾಶದಲ್ಲಿ ಹಾರುವ ಸಾಮರ್ಥ್ಯವನ್ನು ನೀಡಿದೆ. ಆದರೆ ಮುಂಬಯಿಯ ಪಾರಿವಾಳಗಳು ಇಡೀ ದಿನ ಕಬೂತರ್ ಖಾನಾಗಳಲ್ಲೇ ಧಾನ್ಯ ತಿನ್ನುತ್ತಾ ಇದ್ದು ತಮ್ಮ ಆರೋಗ್ಯವನ್ನು ತಾವೇ ಹಾಳು ಮಾಡಿಕೊಳ್ಳುತ್ತಿವೆ. ದೂರಕ್ಕೆ ಹಾರುವ ಸಾಮರ್ಥ್ಯವನ್ನೂ ಕಳಕೊಳ್ಳುತ್ತಿವೆ.

ನಾಲ್ಕೈದು ವರ್ಷದ ಹಿಂದೆ ಗ್ರಾಂಟ್‌ರೋಡ್‌ನ ಕಬೂತರ್ ಖಾನಾದಲ್ಲಿನ ಪಾರಿವಾಳಗಳ ಓಡಾಟಕ್ಕೆ ಸಿಕ್ಕಿ ಮೋಟಾರ್ ಸೈಕಲ್ ಜಾರಿದ್ದರಿಂದ ಮನಪಾ ಇಂಜಿನಿಯರ್ ಏಕನಾಥ್ ಎಂಬವರು ಸಾವನ್ನಪ್ಪಿದ ಘಟನೆಯೂ ಇದೆ. ಅನಂತರ ಮುಂಬಯಿ ಮಹಾನಗರ ಪಾಲಿಕೆಯು ಸಂಚಾರಕ್ಕೆ ಅಡ್ಡಿ ಎನಿಸಿರುವ ಕೆಲವು ಕಬೂತರ್ ಖಾನಾಗಳನ್ನು ಮುಚ್ಚುವ ಪ್ರಸ್ತಾಪ ಮಾಡಿತು. ಹಾಗೂ ದಕ್ಷಿಣ ಮುಂಬಯಿಯ ನವಜೀವನ್ ಸೊಸೈಟಿ, ಮಿನರ್ವಾ, ನೋವಲ್ಟಿ ಟಾಕೀಸ್ ಬಳಿಯ ಕೆಲವು ಕಬೂತರ್ ಖಾನಾಗಳನ್ನು ಮುಚ್ಚಿಬಿಟ್ಟಿತು.

ಮುಂಬಯಿಯ ಮಹಾನಗರ – ಉಪನಗರಗಳಿಂದ ಕಬೂತರ್ ಖಾನಾಗಳನ್ನು ಮುಚ್ಚಿ ಪಾರಿವಾಳಗಳನ್ನು 'ಓಡಿಸುವ' ನಿಟ್ಟಿನಲ್ಲಿ ಮುಂಬಯಿ ಮಹಾನಗರಪಾಲಿಕೆಯು ದಶಕದ ಹಿಂದೆ (2006 ರ ಸುಮಾರಿಗೆ) ತೀರ್ಮಾನಕ್ಕೆ ಇಳಿದಿತ್ತು. ಇದಕ್ಕೆ ಕಾರಣವನ್ನೂ ಆರೋಗ್ಯಾಧಿಕಾರಿಗಳು ನೀಡಿದ್ದರು.

ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿಗಳ ಈ ಮಾತಿಗೆ ಪಕ್ಷಿಪ್ರೇಮಿಗಳು ತಯಾರಿರಲಿಲ್ಲ. ತೀವ್ರವಾಗಿ ವಿರೋಧಿಸಿದ ನಂತರ ಈ ಯೋಜನೆ ಮುಂದೂಡಲಾಯಿತು. ಅಥವಾ ತಟಸ್ಥವಾಯಿತು. ಇಂದು ಗಾಯಾಳು ಪಾರಿವಾಳಗಳನ್ನು ಸಾಗಿಸಲು ಆಂಬ್ಯುಲೆನ್ಸ್ ಸೇವೆ ಕೂಡಾ ಇದೆ.